**ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

**ಸಿ.ಸಿ.ನಂ. 678 / 2021**

**ದಿನಾಂಕಃ 07-02-2025**

ಪಿರ್ಯಾದಿ ಃ- ಅರಕಲಗೂಡು ಪೊಲೀಸ್,

ಃಃ ವಿರುದ್ದ ಃಃ

ಆರೋಪಿ ಃ ದಿನೇಶ ಬಿನ್ ನಾಗರಾಜ ,
30 ವರ್ಷ,
ಯಗಟಿ ಗ್ರಾಮ,
ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು .

**ದಂ.ಪ್ರ.ಸಂ.ಕಲಂಃ 313ರ ಅನ್ವಯ ಆರೋಪಿಯ ವಿಚಾರಣೆ**

ಪ್ರ-1. ನೀವು ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ ?

**ಆರೋಪಿಯ ಉತ್ತರ:-**

**ಪ್ರ-2. ಪ್ರಾಸಾ-1 ರಘು ರವರು ಸಾಕ್ಷ್ಯ ನುಡಿಯುತ್ತಾ** ಆರೋಪಿಯನ್ನು ನಾನು ನೋಡಿರುತ್ತೇನೆ. ದಿನಾಂಕಃ 20.01.2021 ರಂದು ರಾತ್ರಿ 8 ಗಂಟೆ ಸಮಯಕ್ಕೆ ಠಾಣೆಯಲ್ಲಿ ನಾನು ಮತ್ತು ಚಾಸಾ 2 ರವರು ಠಾಣೆಯಲ್ಲಿ ಹಗಲು ಕರ್ತವ್ಯಕ್ಕೆ ಇದ್ದಾಗ ಚಾಸಾ1 ರವರು ಠಾಣೆಗೆ ಬಂದು ಪೊಲೀಸ್ ಬಾತ್ಮಿದಾರರ ಮಾಹಿತಿಯ ಮೇರೆಗೆ ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ , ಯಗಟಿ ಗ್ರಾಮದಲ್ಲಿ ನಾಗರಾಜ ರವರ ಮಗ ದಿನೇಶ ಎಂಬುವವನು ಸಾರ್ವಜನಿಕವಾಗಿ ತನ್ನ ಅಂಗಡಿಯ ಮುಂದೆ ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೇ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನಮ್ಮನ್ನು ಇಲಾಖಾ ಜೀಪ್ ನಂ.ಕೆಎ-13 ಜಿ-818 ರಲ್ಲಿ ಯಗಟಿ ಗ್ರಾಮಕ್ಕೆ ಸುಮಾರು ರಾತ್ರಿ 8.20 ಸಮಯದಲ್ಲಿ ಯಗಟಿ ಗ್ರಾಮಕ್ಕೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-3 ಪ್ರಾಸಾ-1ರವರು** ಮುಂದುವರೆದು, ಅಲ್ಲಿ ಚಾಸಾ 2 ರವರನ್ನು ಪಂಚರನ್ನು ಕರೆದುಕೊಂಡು ಬರಲು ಚಾಸಾ 1 ರವರು ನಿಯೋಜಿಸಿರುತ್ತಾರೆ. ಅದರಂತೆ ಅಲ್ಲೇ ಹೋಗುತ್ತಿದ್ದಂತಹ ಚಾಸಾ 4 ಮತ್ತು ಚಾಸಾ 5 ಇವರನ್ನು ಕರೆದುಕೊಂಡು ಬಂದು ನಮಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿರಲು

ಹಾಗೂ ತನಿಖೆಗೆ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ ಅವರು ನಮ್ಮ ಜೊತೆ ಬಂದು ನಂತರ ದಿನೇಶರವರ ಅಂಗಡಿ ಹತ್ತಿರ ಹೋಗಿ ನೋಡಿದಾಗ ನಮ್ಮನ್ನು ಸಮವಸ್ತ್ರದಲ್ಲಿದ್ದದನ್ನು ಕಂಡು ಒಬ್ಬ ವ್ಯಕ್ತಿ ಓಡಿಹೋಗುತ್ತಿದ್ದ. ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಆತ ದಿನೇಶ ಬಿನ್ ನಾಗರಾಜು, 30 ವರ್ಷ , ಪರಿಶಿಷ್ಟ ಜಾತಿ ಜನಾಂಗ , ಅಂಗಡಿ ಕೆಲಸ ಮತ್ತು ವ್ಯವಸಾಯ , ಯಗಟಿ ಗ್ರಾಮ , ದೊಡ್ಡಮಗ್ಗೆ ಹೋಬಳಿ , ಅರಕಲಗೂಡು ತಾಲ್ಲೂಕು ಎಂದು ತಿಳಿಸಿದ್ದು ನಂತರ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮುಂಭಾಗದಲ್ಲಿ ಪ್ಲಾಸ್ಟಿಕ್ ಚೇರ್ ಮುಂದೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ವಸ್ತುಗಳನ್ನು ನೋಡಿದೆವು. ಚೀಲದ ಒಳಗೆ 90 ಎಂ ಎಲ್ 24 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ಪ್ಯಾಕೇಟ್ ಗಳು ಇದ್ದು , 180 ಎಂ ಎಲ್ ನ 3 ಓಲ್ಡ್ ಟವರ್ ವಿಸ್ಕಿ ಯ ಪ್ಯಾಕೇಟ್ ಗಳು ಇದ್ದವು. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:–**

**ಪ್ರಶ್ನೆ–4 ಫ್ರಾಸಾ–1ರವರು** ಮುಂದುವರೆದು, ನಂತರ ಚಾಸಾ 1 ರವರು ಈತನು ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರ ಚಟುವಟಿಕೆಯನ್ನು ಯಾವುದೇ ಪರವಾನಿಗೆ ಪಡೆಯದೇ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದನ್ನು ಕಂಡು ಚಾಸಾ1 ರವರು ವರದಿ ತಯಾರಿಸಿದರು. ಆ ವರದಿಯನ್ನು ಚಾಸಾ 2 ರವರಿಗೆ ಕೊಟ್ಟು ಠಾಣೆಯ ಮೊಕದ್ದಮ್ಮೆ ಸಂಖ್ಯೆ ತಿಳಿದುಕೊಂಡು ಬರುವಂತೆ ತಿಳಿಸಿರುತ್ತಾರೆ. ಅವರು ಠಾಣೆಯ ಮೊಕದ್ದಮ್ಮೆ ಸಂಖ್ಯೆ 20/2021 ರಲ್ಲಿ ಕಲಂ 32 , 34 ಕೆ. ಇ. ಆಕ್ಟ್ ಮೇರೆಗೆ ವರದಿಯನ್ನು ಪುನಃ ಚಾಸಾ 2 ರವರು ಸ್ಥಳಕ್ಕೆ ಬಂದು ಚಾಸಾ 1 ರವರಿಗೆ ಕೊಟ್ಟಿರುತ್ತಾರೆ. ನಂತರ ಅಲ್ಲೇ ಇದ್ದ ಮದ್ಯವನ್ನು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ತಮ್ಮ ವಶಕ್ಕೆ ಪಡೆದು ಸುಮಾರು 24 90 ಎಂ ಎಲ್ ನ ಪ್ಯಾಕೇಟ್ ಗಳಲ್ಲಿ ಒಂದು ಪ್ಯಾಕೇಟನ್ನು ತೆಗೆದು ಹಾಗೂ ಒಂದು 180 ಎಂ ಎಲ್ ನ ಓಲ್ಡ್ ಟವರ್ ವಿಸ್ಕಿಯ ಪ್ಯಾಕೇಟ್ ನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಅರಗು ಹಾಕಿ ಇಂಗ್ಲೀಷ್ ಅಕ್ಷರ 'ಎ 'ಎಂಬ ಅಕ್ಷರದಿಂದ ಸೀಲ್ ಮಾಡಿ ರಾಸಾಯನಿಕ ವರದಿ ಪಡೆಯಲು ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಲು ಪತ್ರವನ್ನು ತಯಾರಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:–**

**ಪ್ರಶ್ನೆ–5 ಫ್ರಾಸಾ–1ರವರು** ಮುಂದುವರೆದು, ನಂತರ ಆರೋಪಿಯಾದ ದಿನೇಶನನ್ನು ವಶಕ್ಕೆ ಪಡೆದರು. ನಂತರ ವಶಕ್ಕೆ ಪಡೆದ ಮದ್ಯದ ಪ್ಯಾಕೇಟ್ ಗಳನ್ನು ಸುಮಾರು 9.30 ಗಂಟೆಗೆ ಠಾಣೆಗೆ ತಂದು ಚಾಸಾ 8 ರವರಿಗೆ ವರದಿ ಮಾಡಿ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದು, ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಹಾಗೂ ತನ್ನ ಜೊತೆ ಚಾಸಾ 4 ಮತ್ತು 5 ರವರು ಹಾಜರಿದ್ದು, ನ್ಯಾಯಾಲಯದ ಮುಂದೆ ಇರುವ ಎರಡು ಟೆಟ್ರಾ ಪ್ಯಾಕೇಟ್ ಗಳನ್ನು ಮೇಲೆ ಹೇಳಿದ ದಿನದಂದು

ಆರೋಪಿ ಅಂಗಡಿಯಿಂದ ವಶಪಡಿಸಿಕೊಂಡ ಟೆಟ್ರಾ ಪ್ಯಾಕೇಟ್‌ಗಳನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ -6 ಫ್ರಾಸಾ-2 ಬಸವರಾಜು** ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.01.2021 ರಂದು ರಾತ್ರಿ 8 ಗಂಟೆ ಸಮಯಕ್ಕೆ ಠಾಣೆಯಲ್ಲಿ ನಾನು ಮತ್ತು ಚಾಸಾ 3 ರವರು ಠಾಣೆಯಲ್ಲಿ ಹಗಲು ಕರ್ತವ್ಯಕ್ಕೆ ಇದ್ದಾಗ ಚಾಸಾ1 ರವರು ಠಾಣೆಗೆ ಬಂದು ಪೊಲೀಸ್ ಬಾತ್ಮಿದಾರರ ಮಾಹಿತಿಯ ಮೇರೆಗೆ ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ , ಯಗಟಿ ಗ್ರಾಮದಲ್ಲಿ ನಾಗರಾಜ ರವರ ಮಗ ದಿನೇಶ ಎಂಬುವವನು ಸಾರ್ವಜನಿಕವಾಗಿ ತನ್ನ ಅಂಗಡಿಯ ಮುಂದೆ ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನಮ್ಮನ್ನು ಇಲಾಖಾ ಜೀಪ್ ನಂ.ಕೆಎ-13 ಜಿ-818 ರಲ್ಲಿ ಯಗಟಿ ಗ್ರಾಮಕ್ಕೆ ಸುಮಾರು ರಾತ್ರಿ 8.20 ಸಮಯದಲ್ಲಿ ಯಗಟಿ ಗ್ರಾಮಕ್ಕೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ -7 ಫ್ರಾಸಾ-2ರವರು** ಮುಂದುವರೆದು, ಅಲ್ಲಿ ನನಗೆ ಪಂಚರನ್ನು ಕರೆದುಕೊಂಡು ಬರಲು ಹೇಳಿದಾಗ ನಾನು ಅದೇ ಗ್ರಾಮದ ಚಾಸಾ 4 ಮತ್ತು ಚಾಸಾ 5 ಇವರನ್ನು ಕರೆದುಕೊಂಡು ಬಂದು ನಮಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿರಲು ಹಾಗೂ ತನಿಖೆಗೆ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ ಅವರು ನಮ್ಮ ಜೊತೆ ಬಂದು ನಂತರ ದಿನೇಶರವರ ಅಂಗಡಿ ಹತ್ತಿರ ಹೋಗಿ ನೋಡಿದಾಗ ನಮ್ಮನ್ನು ಸಮವಸ್ತ್ರದಲ್ಲಿದ್ದದನ್ನು ಕಂಡು ಒಬ್ಬ ವ್ಯಕ್ತಿ ಓಡಿಹೋಗುತ್ತಿದ್ದ. ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಆತ ದಿನೇಶ ಬಿನ್ ನಾಗರಾಜು, 30 ವರ್ಷ , ಪರಿಶಿಷ್ಟ ಜಾತಿ ಜನಾಂಗ, ಅಂಗಡಿ ಕೆಲಸ ಮತ್ತು ವ್ಯವಸಾಯ, ಯಗಟಿ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು ಎಂದು ತಿಳಿಸಿದ್ದು ನಂತರ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮುಂಭಾಗದಲ್ಲಿ ಪ್ಲಾಸ್ಟಿಕ್ ಚೇರ್ ಮುಂದೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ವಸ್ತುಗಳನ್ನು ನೋಡಿದೆವು. ಚೀಲದ ಒಳಗೆ 90 ಎಂ ಎಲ್ 24 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ಪ್ಯಾಕೇಟ್ ಗಳು ಇದ್ದು , 180 ಎಂ ಎಲ್ ನ 3 ಓಲ್ಡ್ ಟವರ್ ವಿಸ್ಕಿ ಯ ಪ್ಯಾಕೇಟ್ ಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-8 ಫ್ರಾಸಾ-2ರವರು** ಮುಂದುವರೆದು, ನಂತರ ಚಾಸಾ 1 ರವರು ಈತನು ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರ ಚಟುವಟಿಕೆಯನ್ನು ಯಾವುದೇ ಪರವಾನಿಗೆ ಪಡೆಯದೇ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದನ್ನು ಕಂಡು ಚಾಸಾ1 ರವರು ವರದಿ ತಯಾರಿಸಿದರು. ಆ ವರದಿಯನ್ನು ನನಗೆ ಕೊಟ್ಟು ಠಾಣೆಯ ಮೊಕದ್ದಮ್ಮೆ ಸಂಖ್ಯೆ ತಿಳಿದುಕೊಂಡು ಬರುವಂತೆ ತಿಳಿಸಿರುತ್ತಾರೆ. ನಾನು ಠಾಣೆಯ ಮೊಕದ್ದಮ್ಮೆ ಸಂಖ್ಯೆ 20/2021 ರಲ್ಲಿ ಕಲಂ 32 , 34 ಕೆ. ಇ. ಆಕ್ಟ್ ಮೇರೆಗೆ ವರದಿಯನ್ನು ಪುನಃ ನಾನು ಸ್ಥಳಕ್ಕೆ ಬಂದು ಚಾಸಾ 1 ರವರಿಗೆ ಕೊಟ್ಟಿರುತ್ತೇನೆ. ನಂತರ ಅಲ್ಲೇ ಇದ್ದ ಮದ್ಯವನ್ನು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ತಮ್ಮ ವಶಕ್ಕೆ ಪಡೆದು ಸುಮಾರು 24 90 ಎಂ ಎಲ್ ನ ಪ್ಯಾಕೇಟ್ ಗಳಲ್ಲಿ ಒಂದು ಪ್ಯಾಕೇಟನ್ನು ತೆಗೆದು ಹಾಗೂ ಒಂದು 180 ಎಂ ಎಲ್ ನ ಓಲ್ಡ್ ಟವರ್ ವಿಸ್ಕಿಯ ಪ್ಯಾಕೇಟ್ ನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಅರಗು ಹಾಕಿ ಇಂಗ್ಲೀಷ್ ಅಕ್ಷರ 'ಎ 'ಎಂಬ ಅಕ್ಷರದಿಂದ ಸೀಲ್ ಮಾಡಿ ರಾಸಾಯನಿಕ ವರದಿ ಪಡೆಯಲು ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಲು ಪತ್ರವನ್ನು ತಯಾರಿಸಿದರು . ನಂತರ ಆರೋಪಿಯಾದ ದಿನೇಶನನ್ನು ವಶಕ್ಕೆ ಪಡೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-9 ಫ್ರಾಸಾ-2ರವರು** ಮುಂದುವರೆದು, ನಂತರ ವಶಕ್ಕೆ ಪಡೆದ ಮದ್ಯದ ಪ್ಯಾಕೇಟ್ ಗಳನ್ನು ಸುಮಾರು 9.30 ಗಂಟೆಗೆ ಠಾಣೆಗೆ ತಂದು ಚಾಸಾ 8 ರವರಿಗೆ ವರದಿ ಮಾಡಿ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡು, ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ನಲ್ಲಿರುವ ತನ್ನ ಸಹಿಯನ್ನು ಹಾಗೂ ನನ್ನ ಜೊತೆ ಚಾಸಾ 4 ಮತ್ತು 5 ರವರು ಹಾಜರಿದ್ದು ಮಹಜರ್ ಗೆ ಸಹಿ ಮಾಡಿದ್ದು, ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು ಟೆಟ್ರಾ ಪ್ಯಾಕೇಟ್ ಗಳನ್ನು ಮೇಲೆ ಹೇಳಿದ ದಿನದಂದು ಆರೋಪಿ ಅಂಗಡಿಯಿಂದ ವಶಪಡಿಸಿಕೊಂಡ ಟೆಟ್ರಾ ಪ್ಯಾಕೇಟ್ ಗಳು ಆಗಿದ್ದು, ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವು ಸದರಿ ದಿನದಂದು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯಾಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-10 ಫ್ರಾಸಾ-3 ವೈ ಸತ್ಯನಾರಾಯಣ ಇವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20.01.2021 ರಂದು ರಾತ್ರಿ 8 ಗಂಟೆಗ ನಾನು ಕಚೇರಿಯಲ್ಲಿದ್ದಾಗ ಯಗಟಿ ಗ್ರಾಮದದಿನೇಶ ಎಂಬುವವರು ತನ್ನ ಪೆಟ್ಟಿಗೆ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವರು ಎದು ಮಾಹಿತಿ ಬಂದ ಆದಾರದ ಮೇಲೆ ನಾನು ಚಾಸಾ 2 ಮತ್ತು 3 ರವರೊಂದಿಗೆ ಡಿಇಲಾಖಾ ಜೀಪ್ ನಲ್ಲಿ ಹೊರಟು ಜೋಡಿಗುಬ್ಬಿ ಸರ್ಕಲ್ ನಲ್ಲಿ ನಿಲ್ಲಿಸಿ ಇಬ್ಬರು ಪಂಚರನ್ನು ಕೆರೆಕೋಡಿ ಎಂಬ ದೇವಾಲಯದ ಮುಂಭಾಗದಲ್ಲಿರುವ ಆರೋಪಿ ದಿನೇಶ ರವರ ಪೆಟ್ಟಿಗೆ ಅಂಗಡಿ ಮುಂಭಾಗ ಮದ್ಯವನ್ನು ಮಾರಾಟ ಮಾಡುತ್ತಿದ್ದು ಹಾಗೂ ನಮ್ಮನ್ನು

ನೋಡಿ ಓಡಿಹೋಗಲು ಪ್ರಯತ್ನಿಸಿದಾಗ ನಾವು ಮತ್ತು ಪಂಚರನ್ನು ಆರೋಪಿಯನ್ನು ಸುತ್ತುವರೆದು ಹಿಡಿದುಕೊಂಡಿರುತ್ತೇವೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-11 ಫ್ರಾಸಾ-3ರವರು** ಮುಂದುವರೆದು, ಆತನ ವಶದಲ್ಲಿ90 ಎಂ ಎಲ್ ನ 24 ಓರಿಜಿನಲ್ ಛಾಯ್ಸ್‌ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳು ಹಾಗೂ 180 ಎಂ ಎಲ್ 3 ಓಲ್ಡ್ ಟವರಿನ್ ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳು ಸಿಕ್ಕಿರುತ್ತವೆ. ಅವುಗಳನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ವರದಿಯನ್ನು ತಯಾರಿಸಿ ಚಾಸಾ 2 ರವರ ಮುಖಾಂತರ ಠಾಣೆಗೆ ಕಳುಹಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಸೂಚಿಸಿ, ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ನನ್ನ ಜೊತೆ ಕರೆದುಕೊಂಡು ಹೋದ ಚಾಸಾ4 ಮತ್ತು 5 ರವರಸಮಕ್ಷಮ ಕೃತ್ಯ ಸ್ಥಳದ ಮಹಜರ್ ಮಾಡಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಎರಡು ಮಾದರಿಗಳಿಂದ ಒಂದೊಂದು ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿದ್ದು, ಸದರಿ ಮಹಜರನ್ನು ರಾತಿ4 9.30 ರಿಂದ 10.30 ರವರೆಗೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-12 ಫ್ರಾಸಾ-3ರವರು** ಮುಂದುವರೆದು, ನಂತರ ಠಾಣೆಗೆ ಬಂದು ಆರೋಪಿ ಮತ್ತು ಮಾಲನ್ನು ಮುಂದಿನ ಕ್ರಮವಾಗಿ ಪಿ ಎಸ್ ಐ ರವರಿಗೆ ಹಸ್ತಾತಂತರಿಸಿರುತ್ತೇನೆ. ಸದರಿ ದಿನದಂದು ಅಮಾನತುಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಈಗ ನ್ಯಾಯಾಲಯದಲ್ಲಿ ಇರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವು ಸದರಿ ದಿನದಂದು ಪರವಾನಗಿ ಇಲ್ಲದೇ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯಾಗಿದ್ದು, ದೂರಿನಲ್ಲಿರುವ ತನ್ನ ಸಹಿ, ಕೃತ್ಯ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು, ಮಾದರಿ ಸೀಲ್ ನ ನಕಲನ್ನು ಹಾಗೂ ಮಹಜರ್ ಕಾಲದಲ್ಲಿ ಚಾಸಾ 2 ರಿಂದ 4 ರವರು ಹಾಜರಿದ್ದರು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ:-**

**ಪ್ರಶ್ನೆ-13 ಫ್ರಾಸಾ-4 ಮಾಲಾ ಎನ್. ಇವರು** ತಮ್ಮ ಸಾಕ್ಷ್ಯದಲ್ಲಿ ಚಾಸಾ 2 ರವರು ಚಾಸಾ 1 ರವರು ನೀಡಿದ ಪಿರ್ಯಾದಿಯನ್ನು ತಂದು ನನಗೆ ನೀಡಿರುತ್ತಾರೆ. ಅದನ್ನು ಪಡೆದು ದಿನಾಂಕ 20.01.2021 ರಂದು ರಾತ್ರಿ 9 ಗಂಟೆಗೆ ನಾನು ಪ್ರಕರಣವನ್ನು ದಾಖಲಿಸಿದ್ದು, ಪ್ರಕರಣವನ್ನು 20/2021, ಕಲಂ 32 ,

34 ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಥಮ ವರ್ತಮಾನ ವರದಿಯನ್ನು ಸಿಬ್ಬಂದಿಯಾದ ಯೋಗೇಗೌಡ ರವರೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿದ್ದು, ಅದರಲ್ಲಿ ಸಿಕ್ಕ ಎಂ ಓ ಗಳು 90 Original choice Deluxe Whisky ಒಟ್ಟು 24 ಪ್ಯಾಕೇಟ್ ಗಳು , ಮತ್ತು 180 ಎಂ ಎಲ್ ನ 3 Old Tavern old whisky packets ಗಳನ್ನು ಸಿಕ್ಕಿರುತ್ತವೆ. ಇದರ ಪೈಕಿ ಒಂದೊಂದು ಪ್ಯಾಕ್ ಗಳನ್ನು ಎಪ್ ಎಸ್ ಎಲ್ ವರದಿಗಾಗಿ ಕಳುಹಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ**:-

**ಪ್ರಶ್ನೆ-14 ಫ್ರಾಸಾ-4 ರವರು** ಮುಂದುವರೆದು, ಆರೋಪಿ ಕಲಂ 41(ಎ) ರಡಿಯಲ್ಲಿ ನೋಟೀಸ್ ನೀಡಿ ಅವರನ್ನು ವಿಚಾರಣೆ ಮಾಡಿರುತ್ತೇನೆ. ಮುದ್ದೆಮಾಲುಗಳನ್ನು ಆರ್.ಎಪ್.ಎಸ್.ಎಲ್ ಗೆ ಚಾಸಾ 6 ರವರ ಮುಖಾಂತರ ಪರೀಕ್ಷೆಗೆಂದು ಕಳುಹಿಸಿದ್ದು, ಸದರಿ ಮಾಲುಗಳನ್ನು ನಮ್ಮ ಬಳಿಯೇ ಉಳಿಸಿಕೊಳ್ಳುತ್ತೇವೆ ಎಂದು ಅಬಕಾರಿ ಇಲಾಖೆಯವರಿಗೆ ಕೋರಿದ್ದು, ದಾಳಿ ಸಮಯದಲ್ಲಿ ಇದ್ದಂತಹ ಎಲ್ಲಾ ಸಾಕ್ಷಿಗಳ ಹೇಳಿಕೆಗಳನ್ನು ಪಡೆದು, ದೂರಿನಲ್ಲಿರುವ ತನ್ನ ಸಹಿಯನ್ನು ಹಾಗೂ ಸ್ವತ್ತಿನ ಪಟ್ಟಿಯ ದೃಡೀಕೃತ ನಕಲನ್ನು ಹಾಗೂ ದಿನಾಂಕಃ 31.01.2021 ರಂದು ಆರ್ ಎಪ್ ಎಸ್ ಎಲ್ ಗೆ ಮಾಲುಗಳನ್ನು ಪರೀಕ್ಷೆ ಮಾಡಲು ಕೋರಿ ಕಳುಹಿಸಿದ ಅರ್ಜಿಯಲ್ಲಿನ ಸಹಿಯನ್ನು ದಿನಾಂಕ 25.02.2021 ರ ಆರ್.ಎಪ್.ಎಸ್.ಎಲ್ ವರದಿಯನ್ನು ಗುರುತಿಸಿದ ಬಗ್ಗೆ ಹಾಗೂ ಆರೋಪಿಯ ವಿರುದ್ದ ಸಾಕಷ್ಟುಗಳು ಪುರಾವೆಗಳು ಸಿಕ್ಕ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಆರೋಪಿಯ ಉತ್ತರ**:-

**ಪ್ರ-15**: ಈ ಬಗ್ಗೆ ನಿಮಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

**ಆರೋಪಿಯ ಉತ್ತರ**:-

**ಪ್ರ-16:** ನಿಮ್ಮ ಪರ ಯಾವುದಾದರೂ ದಾಖಲಾತಿ ಇದೆಯೇ?

**ಆರೋಪಿಯ ಉತ್ತರ**:-

ಪ್ರ–17: ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

**ಆರೋಪಿಯ ಉತ್ತರ:–**

( ಆರೋಪಿಯ ವಿಚಾರಣೆಯನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿ ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ 07ನೇ ಫೆಬ್ರವರಿ –2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದೆ.)

**(ಶ್ರೀಮತಿ. ಚಂಪಾಶ್ರೀ ಆರ್.)**
**ವ್ಯವಹಾರ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು.**